ಸಂತೇಮಾರನಹಳ್ಳಿ ವಿಧಾನಸಭಾಕ್ಷೇತ್ರದಲ್ಲಿ ಕಾಡಾನೆಯ ತುಳಿತಕ್ಕೆ ಬಲಿಯಾದವರಿಗೆ ಪರಿಹಾರ

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೆಮಾರನಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಸ್ಪರ್ಧಿಸಿರತಕ್ಕಂಥ ಸಂತೇಮಾರನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂಥ ಕೌಲಂದಿ ಹೋಬಳಿ, ಹುಸ್ಕೂರು ಗ್ರಾಮದಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಮಹದೇವಶೆಟ್ಟಿ ಬಿನ್ ಮಹದೇವಶೆಟ್ಟಿ ಎಂಬುವವರು ಜಮೀನಿಗೆ ಕೂಲಿ ಕೆಲಸಕ್ಕಾಗಿ ಹೋಗುವಂಥ ಸಂದರ್ಭದಲ್ಲಿ ಕಾಡಾನೆಯ ತುಳಿತಕ್ಕೆ ಬಲಿಯಾಗಿದ್ದಾರೆ ಆದುದರಿಂದ ದುಃಖಭರಿತ ಕುಟುಂಬದವರಿಗೆ ಒಂದು ಲಕ್ಷ ರೂಪಾಯಿಯನ್ನು ಪರಿಹಾರವನ್ನು ನೀಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಹಿಂದೆ ಇಂತಹ ದುರಂತ ಆಗಿದ್ದಾಗ ಸರ್ಕಾರ ಯಾವರೀತಿ ಪರಿಹಾರ ಕೊಟ್ಟಿದೆ ಅದಕ್ಕಿಂತ ಉತ್ತಮವಾಗಿ ಕೊಡುತ್ತೇವೆ.

ಅತಿವೃಷ್ಟಿಯಿಂದ ರಸ್ತೆ ಹಾಳಾಗಿರುವ ಬಗ್ಗೆ

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸುಗೂರು) : ಸನ್ಮಾನ್ಯ ಅಧ್ಯಕ್ಷರೆ, 1998ನೇ ಸಾಲಿನ ಅತಿವೃಷ್ಟಿ ಮಳೆಯಿಂದ ರಸ್ತೆಗಳು ಹಾಳಾಗಿದ್ದು, ಹಾನಿಯ ವೆಚ್ಚ ಎಷ್ಟು? ಈ ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೆ ಖರ್ಚಾದ ಹಣ ಎಷ್ಟು? ಇನ್ನೂ ರಿಪೇರಿಯಾಗದಂಥ ರಸ್ತೆಗಳು ಎಷ್ಟು? ಸದರಿ ಕೆಲಸಗಳಿಗೆ ಕೇಂದ್ರಸರ್ಕಾರದಿಂದ ಎಷ್ಟು ಹಣ ಮಂಜೂರಾಗಿತ್ತು ಅದರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳುತ್ತೇನೆ.

ಅಧ್ಯಕ್ಷರು : ತಾವು ಪ್ರಶ್ನೆಯನ್ನು ಕೇಳುವುದಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಸದಸ್ಯರು ಗಮನ ಸೆಳೆದಿರುವಂತಹದಕ್ಕೆ, ಸುಮಾರು 400 ಕೋಟಿ ರೂಪಾಯಿಗಳನ್ನು ನಬಾರ್ಡ್‌ನ ವತಿಯಿಂದ ತೆಗೆದುಕೊಂಡು ಬಂದಿದ್ದೇವೆ. ಇದಲ್ಲದೆ ಮೊನ್ನೆ ನಮ್ಮ ಕಾಡಾ ಮಂತ್ರಿಗಳಾದ ವೆಂಕಟೇಶ್‌ರವರು ಮತ್ತು ಲೋಕೋಪಯೋಗಿ ಸಚಿವರು ಬೊಂಬಾಯಿಗೆ ಹೋಗಿ ಮತ್ತೆ 100 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ತರತಕ್ಕಂಥದ್ದನ್ನು ಮಾಡಿದ್ದಾರೆ. ಹೆಚ್.ಕೆ.ಡಿ.ಬಿ. ವ್ಯಾಪ್ತಿಯಲ್ಲಿ ಬರತಕ್ಕಂಥ ಶಾಸಕರುಗಳು ತಮ್ಮ ಕ್ಷೇತ್ರದಲ್ಲಿ ಬರತಕ್ಕಂಥ ರಸ್ತೆಗಳ ದುರಸ್ತಿಗಾಗಿ ಒಂದೊಂದು ಕೋಟಿ ರೂಪಾಯಿಯಷ್ಟು ಹಣವನ್ನು ನಬಾರ್ಡ್‌ನಿಂದ ಸಾಲ ತೆಗೆದುಕೊಂಡು ಬಂದಿದ್ದಾರೆ. ಒಟ್ಟು ಇರತಕ್ಕಂಥ ವಿವರಗಳನ್ನು ನಂತರ ತಮಗೆ ಪತ್ರದ ಮುಖೇನ ತಿಳಿಸುತ್ತೇನೆ.

ಮಂಡ್ಯ ಜಿಲ್ಲೆಯಲ್ಲಿ ಕಂದುಜಿಗಿ ಹುಳುವಿನಿಂದ ಭತ್ತದ ಬೆಳೆಗೆ ಹಾನಿ.

ಶ್ರೀ ಜೆ.ಬಿ. ಶಿವಕುಮಾರ್ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ 7 ತಾಲೂಕುಗಳಲ್ಲಿ ಕಂದುಜಿಗಿ ಹುಳ ರೋಗಕ್ಕೆ 338 ಗ್ರಾಮಗಳು, ಸುಮಾರು 6982 ರೈತ ಕುಟುಂಬ, 1283 ಹೆಕ್ಟೇರ್‌ಗೂ

ಮಿಗಿಲಾದಂಥ ಭತ್ತದ ಬೆಳೆ ಇದು ನಾಶವಾಗಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅಂದು ಆ ಕ್ಷಣದಲ್ಲೇ ನಮ್ಮ ಕೃಷಿ ಸಚಿವರು ನಮ್ಮ ಜಿಲ್ಲೆಯ ಬಹುತೇಕ ಪ್ರದೇಶಕ್ಕೆ ಭೇಟಿ ಕೊಟ್ಟು ಎಲ್ಲವನ್ನೂ ಕೂಡ ಸಮೀಕ್ಷೆ ಮಾಡಿದ್ದಾರೆ, ಇಲಾಖೆಯ ವತಿಯಿಂದ ವಿವರಗಳನ್ನು ತರಿಸಿಕೊಂಡಿದ್ದಾರೆ. ಈ ಕಂದುಜಿಗಿಹುಳ ಮತ್ತು ಇನ್ನೊಂದು ಕುತ್ತಿಗೆಗೆ ಬೆಂಕಿ ಹುಳ ರೋಗಗಳಿಂದ ಸುಮಾರು ಇಪ್ಪತ್ತು ಸಾವಿರ ರೈತ ಕುಟುಂಬಗಳು ಸುಮಾರು ಹನ್ನೆರಡು ಕೋಟಿಗೂ ಮಿಗಿಲಾಗಿ ಆರ್ಥಿಕ ನಷ್ಟವನ್ನು ಅನುಭವಿಸಿರತಕ್ಕಂಥ ಸಂಪೂರ್ಣ ಮಾಹಿತಿ ಮಂಡ್ಯ ಜಿಲ್ಲಾಧಿಕಾರಿಗಳಿಂದ ಹಾಗೂ ವ್ಯವಸಾಯ ಇಲಾಖೆಯ ಅಧಿಕಾರಿಗಳಿಂದ ಸರ್ಕಾರದ ಗಮನಕ್ಕೆ ಬಂದಿದೆ. ಇದಕ್ಕೆ ಸೂಕ್ತ ಪರಿಹಾರವನ್ನು ಕೊಡಬೇಕೆಂದು ನಾನು ಸರ್ಕಾರದ ಮುಂದೆ ವಿನಂತಿಸಿಕೊಂಡಿದ್ದೇನೆ. ನಮ್ಮ ಕೃಷಿಸಚಿವರಾದ ಶ್ರೀಮಾನ್ ಭೈರೇಗೌಡರ ಬಳಿಯೂ ಸಂಪೂರ್ಣ ಮಾಹಿತಿ ಇದೆ ಈ ಬೆಳೆ ಹಾನಿಯಿಂದ ರೈತರಿಗೆ ಆಗಿರತಕ್ಕಂಥ ನಷ್ಟವನ್ನು ತುಂಬಿಕೊಡಲಿಕ್ಕೆ ನೆರವಾಗಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಅಧ್ಯಕ್ಷರು : ಈಗ ನೀವೇ ಕಮಿಟಿಯಲ್ಲಿದ್ದೀರಿ. ನೀವೇ ನಿಮ್ಮ ಊರನ್ನೆಲ್ಲಾ ಸುತ್ತಿ ಏನೇನು ಆಗಬೇಕೆಂದು ನೀವೇ ಹೇಳಬಹುದಲ್ಲಾ, ನೀವು ಪ್ರಸ್ತಾಪ ಮಾಡಿದ ವಿಷಯವನ್ನು ಕಮಿಟಿಯ ವ್ಯಾಪ್ತಿಗೆ ತೆಗೆದುಕೊಳ್ಳಿ.

ಶ್ರೀ ಬಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ಒಂದು ಹೇಳಿಕೆಯನ್ನು ಕೊಡಲಿ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಡ್ಯ ಕ್ಷೇತ್ರದಲ್ಲಿ ಮುಂಗಾರು ಹಂಗಾಮ್‌ನಲ್ಲಿ ಭತ್ತದ ಬೆಳೆಗೆ 55,383 ಹೆಕ್ಟಾರ್ ಸಾಮಾನ್ಯ ಕ್ಷೇತ್ರವಿದ್ದು, ಈ ಹಂಗಾಮ್‌ನಲ್ಲಿ 57,722 ಹೆಕ್ಟಾರ್ ಬಿತ್ತನೆಯಾಗಿರುತ್ತದೆ. ಈ ಪೈಕಿ 7,619 ಹೆಕ್ಟಾರ್‌ನಲ್ಲಿ ಬೆಂಕಿ ರೋಗ ಮತ್ತು ಕಂದು ಜಿಗಿ ಹುಳುಗಳಿಂದ ಬೆಳೆ ಹಾನಿಗೊಳಗಾಗಿದ್ದು ಮತ್ತೆ 80 ಹೆಕ್ಟಾರ್‌ಗೆ ಆಗಸ್ಟ್ ತಿಂಗಳಲ್ಲಿ ಒಣಹವೆಯಲ್ಲಿ ತೊಂದರೆಯಾಗಿರುತ್ತದೆ. ಸದರಿ ವಿಷಯದ ಬಗ್ಗೆ ವಿವರಗಳನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಲಾಗಿದೆ. ಈ ವಿಷಯವಾಗಿ ತಾವೇ ತಿಳಿಸಿರುವ ಹಾಗೆ ಜಂಟಿ ಸದನ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಅಧ್ಯಕ್ಷರಾಗಿ ಶ್ರೀ ಶಿವಕುಮಾರ್‌ರವರೇ ಆಗಿದ್ದಾರೆ. ಆದುದರಿಂದ ಈ ಸಮಿತಿಯು ಆ ಸ್ಥಳಕ್ಕೆ ಭೇಟಿ ಕೊಟ್ಟು ವಿಷಯ ಸಂಗ್ರಹಿಸಿ ಅವರು ತೆಗೆದುಕೊಳ್ಳುತ್ತದೆಂಬ ವಿಚಾರವನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಮೈಸೂರು ಪೇಪರ್ ಮಿಲ್ಸ್ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮೈಸೂರು ಪೇಪರ್ ಮಿಲ್ಸ್‌ನ ವಿಚಾರದ ಬಗ್ಗೆ.....

ಅಧ್ಯಕ್ಷರು : ತಮಗೆ ನಾನು ಬೆಳಿಗ್ಗೆ ಹೇಳಿದ್ದೆನಲ್ಲಾ, ನಾನು ನಿಮಗಾಗಿ ತುಂಬಾ ಹೊತ್ತು ಕಾದಿದ್ದೆ, ನೀವು ಯಾರೂ ಬರಲಿಲ್ಲ, ಅವರು ಪೇಪರ್ಸ್ ಕೊಟ್ಟು ಹೋಗಿದ್ದಾರೆ. ಅವರು ನಿನ್ನೆ ಇಡೀ ದಿವಸ ಕಾದಿದ್ದರು, ನಾಳೆ ಬೇಕಾದರೆ ಮತ್ತೆ ಇರುತ್ತೇನೆ.